ಕರ್ನಾಟಕ ಕಿಯೋನಿಕ್ಸ್ ಸಂಸ್ಥೆ ಎಲೆಕ್ಟ್ರಾನಿಕ್ ನಗರವನ್ನು ಮಾಡುವ ಸಲುವಾಗಿ ರೈತರಿಂದ ಜಮೀನು ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ.

ಶ್ರೀ ಯು.ಆರ್. ಸಭಾಪತಿ: (ಉಡುಪಿ) ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ (ಕಿಯೋನಿಕ್ಸ್) ಸಂಸ್ಥೆಯು 1995-96ನೇ ಸಾಲಿನಲ್ಲಿ ಸುಮಾರು ಒಂಬತ್ತು ಕೋಟಿಗಳಷ್ಟು ನಷ್ಟವನ್ನು ಅನುಭವಿಸಿದೆ. ಅದಾಗ್ಯೂ ಸಹ ಈ ಸಂಸ್ಥೆಯ ನಷ್ಟವನ್ನು ತುಂಬಿಕೊಳ್ಳುವ ಯೋಜನೆ ಮಾಡದೇ ಕೋನಪ್ಪನ ಅಗ್ರಹಾರ ಸುಮಾರು 200 ಕೆರೆ ಜಮೀನನ್ನು ಖರೀದಿಸಿ ಎಲೆಕ್ಟ್ರಾನಿಕ್ ನಗರವನ್ನು ಮಾಡಲು ಹೊರಡಿದೆ. ಈಗಾಗಲೇ ಸಂಬಂಧವಾಗಿ ಹಲವಾರು ಕಡೆ ಜಮೀನನ್ನು ಖರೀದಿಸಿ ರೈತರಿಗೆ ಉಳುಮೆ ಮಾಡಲು ಜಮೀನು ಇಲ್ಲದಂತೆ ಆಗಿರುತ್ತದೆ. ಈಗ ಈ ಭಾಗದಲ್ಲೂ ಸಹ ರೈತರ ಜಮೀನು ಸ್ವಾಧೀನ ಕ್ರಮ ಕೈಗೊಳ್ಳಲು ಹೊರಟಿರುವುದರಿಂದ ರೈತರಿಗೆ ತುಂಬಾ ಅನ್ಯಾಯವಾಗುತ್ತಿದೆ. ಆದುದರಿಂದ ಈ ವಿಷಯವನ್ನು ಬೃಹತ್ ಕೈಗಾರಿಕಾ ಸಚಿವರು ಸಾರ್ವಜನಿಕ ಮಹತ್ತರ ವಿಷಯವಾದ ಇದನ್ನು ಅತಿ ಶೀಘ್ರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲು ಈ ಸದನದ ಗಮನವನ್ನು ಸೆಳೆಯಲಿಚ್ಚಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: (ಗ್ರಾಮೀಣ ಮತ್ತು ಪಂಚಾಯಿತ ರಾಜ್ಯ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಯವರ ಗಮನಕ್ಕೆ ತಂದು ಉತ್ತರವನ್ನು ಕಳುಹಿಸಿಕೊಡುತ್ತೇವೆ.

ಮಂಗಳೂರು ನಗರವನ್ನು ಅಭಿವೃದ್ಧಿಪಡಿಸಲು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಹಾಗೂ ವರ್ಲ್ಡ್ ಬ್ಯಾಂಕಿನ ಸಹಾಯದಿಂದ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ.

ಶ್ರೀ ಕುಂಬಳೆ ಸುಂದರರಾವ್ (ಸೂರತ್ಕಲ್): (ಶ್ರೀ ಯೋಗೇಶ್ ಭಟ್ಟರವರ ಪರವಾಗಿ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯೋಗೀಶ್ ಭಟ್ಟರವರು ಮಂಗಳೂರಿಗೆ ಹೋಗಿದ್ದಾರೆ. ಅವರು ಸಭಾಧ್ಯಕ್ಷರಿಗೆ ಆಥಾರೈಜೇಷನ್ ಲೆಟರ್ ಕೊಟ್ಟಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆ ಯ ಡ್ರೈನೇಜ್ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ (2ನೇಯ ಹಂತದ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ತರಲು) ರಸ್ತೆ ಸುಧಾರಣೆಗೆ, ಮಾರ್ಕೆಟ್ ಕಟ್ಟಡ ಅಭಿವೃದ್ಧಿಗೊಳಿಸಲು, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್, ಅಥವಾ ವರ್ಲ್ಡ್ ಬ್ಯಾಂಕಿನ ಸಹಾಯದಿಂದ ಯಾವ ಕಾರ್ಯಕ್ರಮ ಹಾಕಿಕೊಂಡಿದೆ? ವಿವರಿಸಿ, ಇದಕ್ಕೆ ಪೂರಕವಾಗಿ ಅಧ್ಯಯನ ನಡೆಸಲು ಟಾಟಾ ಕನ್ಸಲ್ಟೆನ್ಸಿಗೆ ಪರವಾನಿಗೆ ಕೊಡಲು ರಾಜ್ಯ ಸರ್ಕಾರ ಕಳೆದ ಆರು ತಿಂಗಳುಗಳಿಂದ ವಿಳಂಬ ಮಾಡಿದ ಉದ್ದೇಶವೇನು? ಯಾವಾಗ ಪರವಾನಿಗೆ ಕೊಡುತ್ತೀರಿ ಎಂಬುದರ ಬಗ್ಗೆ ರಾಜ್ಯ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆರು ತಿಂಗಳಿಗೊಮ್ಮೆ ಅಧಿವೇಶನ ಸೇರುವುದು. ಮಂತ್ರಿಗಳಿಗೆ ಪುರಸೊತ್ತು ಇಲ್ಲವೆಂದರೆ ಹೇಳಿ ಅವರು ಎಲ್ಲೆ ಇರುತ್ತಾರೆ, ಅಲ್ಲಿಗೇ ಹೋಗಿ ಉತ್ತರವನ್ನು ಕೇಳುತ್ತೇವೆ.

ಉಪಾಧ್ಯಕ್ಷರು: ಈಗ ಇಲ್ಲಿ ಮಂತ್ರಿಗಳು ಇಲ್ಲ ಸದಸ್ಯರುಗಳು ಇಲ್ಲ. ಈ ರೀತಿ ಇಬ್ಬರೂ ಮಾಡಬಾರದು. ಯಾವ ಸದಸ್ಯರು ಕೇಳುವವರು ಅವರು ಇಲ್ಲಿ ಇರಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾವ ಮಂತ್ರಿಗಳಿಗೆ ಹೇಳಿ ಹೋಗಿದ್ದಾರೆ? ಯಾರು ಉತ್ತರವನ್ನು ಕೊಡಬೇಕು? ಇಲ್ಲಿ ಅದು ರೆಡಿ ಇಲ್ಲವೆಂದರೆ ಹೇಗೆ?

ಶ್ರೀ ಸಿದ್ಧರಾಮಯ್ಯ: ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ ನಾನು ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅರ್ಥ ಮಂತ್ರಿಗಳು ಸಚಿವರು ಯಾರು ಎಂದು ಒದ್ದಾಡುತ್ತಿದ್ದಾರೆ. ಹೀಗೆ ಪರಿಸ್ಥಿತಿಯಾದರೆ ಹೇಗೆ? ಅವರಿಗೆ ಗೊತ್ತಿಲ್ಲ ಯಾವ ಯಾವ ಇಲಾಖೆ ಯಾರದ್ದು ಎಂದು?

ಶ್ರೀ ಸಿದ್ಧರಾಮಯ್ಯ: ಮಂಗಳೂರು ನಗರದ್ದು ಅವರಿಗೆ ಏನಾದರೂ ಕೊಟ್ಟಿದ್ದರಾ ಎಂದು ನೋಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಅದನ್ನು ಬಿಟ್ಟು ಪುರಸಭೆಯನ್ನು ನೋಡಿದರೆ ಪರಿಸ್ಥಿತಿ ಹೇಗೆ?

ಶ್ರೀ ಸಿದ್ಧರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮಂಗಳೂರು ನಗರದ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯು ಹಳೆಯದಾದುದರಿಂದ ಹಾಗೂ ಮಂಗಳೂರು ನಗರಪಾಲಿಕೆಯು ಸ್ಥಾಪನೆಯಾದ ನಂತರ ಇತ್ತೀಚೆಗೆ ಹೊಸ ಪ್ರದೇಶಗಳನ್ನು ಸೇರ್ಪಡೆ ಮಾಡಿರುವುದರಿಂದ ನಗರಕ್ಕೆ ಕುಡಿಯುವ ನೀರಿನ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಪ್ರಸ್ತುತ ಬೇಡಿಕೆಗೆ ತಕ್ಕಂತೆ ಪುನರ್ ವ್ಯವಸ್ಥೆಗೊಳಿಸಲು ನೂತನ ಯೋಜನೆಯನ್ನು ಸುಮಾರು ರೂ. 14.00 ಕೋಟಿ ವೆಚ್ಚದಲ್ಲಿ ತಯಾರಿಸಲು ಯೋಚಿಸಲಾಗಿದೆ. ಇದಕ್ಕೆ ಯೋಜನೆಗಳನ್ನು ತಯಾರಿಸಲು ತಾಂತ್ರಿಕ ಪರಿಣತರನ್ನು ಆಹ್ವಾನಿಸಿ ಕೋಟೇಶನ್ ಕರೆಯಲಾಗಿತ್ತು. ಇದಕ್ಕೆ ಉತ್ತರವಾಗಿ ಮೆ: ಟಾಟ್ ಕನ್ಸಲೆಟಿಂಗ್ ಇಂಜಿನಿಯರ್ಸ್, ಮುಂಬೈ ಇವರು ನಮೂದಿಸಿದ ದರ ರೂ. 28.00 ಲಕ್ಷ ಇದ್ದು, ಸ್ಪರ್ಧಿಸಿದ್ದ ನಾಲ್ಕು ಸಂಸ್ಥೆಗಳಿಗೆ ಹೋಲಿಕೆ ಮಾಡಿದಾಗ ಕಡಿಮೆಯಾಗಿದ್ದಿತು ಎಂದು ಮಂಗಳೂರು ಮಹಾನಗರಪಾಲಿಕೆಯು ಮೆ:ಟಾಟಾ ಕನ್ಸಲೆಟಿಂಗ್ ಇಂಜಿನಿಯರ್ಸ್ ರವರನ್ನು ಕನ್ಸಲ್ಟೆಂಟ್ ಆಗಿ ಆರಿಸಿರುತ್ತದೆ. ಇವರಿಗೆ ಈ ಕಾರ್ಯವನ್ನು ವಹಿಸಿ ಕೊಡುವುದಕ್ಕೆ ಸರ್ಕಾರದ ಮಂಜೂರಾತಿಯನ್ನು ಮಂಗಳೂರು ಮಹಾನಗರಪಾಲಿಕೆಯು ಕೋರಿರುತ್ತದೆ. ಇದು ಪ್ರಸ್ತುತ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ನಗರದ ರಸ್ತೆ ಸುಧಾರಣೆ, ಮಾರ್ಕೆಟ್ ಕಟ್ಟಡದ ಅಭಿವೃದ್ಧಿಗೊಳಿಸಲು ಎ.ಡಿ.ಬಿ. ಅಥವಾ ವರ್ಲ್ಡ್ ಬ್ಯಾಂಕಿನ ಸಹಾಯದಿಂದ ಯಾವ ಯೋಜನೆಯು ಇರುವುದಿಲ್ಲ.